6) ಸೂಕ್ತ ಬದಲಾವಣೆ ಮಾಡಿರುವ ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಮತ್ತು ಶೀಘ್ರ ಲಿಪಿ ಪಠ್ಯ ಕ್ರಮಗಳನ್ನು ಜಾರಿಗೆ ತರುವುದು.

Sub : Providing of Borewells & open wells

ಪ್ರಶ್ನೆ : 123 (300) ಶ್ರೀ ಬಿ.ಬಿ. ಚಿಮನಕಟ್ಟಿ (ಬಾದಾಮಿ,) .— ಶ್ರೀ ಎ. ಕೆ. ಕಟ್ಟೀಮನಿ (ಮುದೋಳ್) .— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಜ್ಯದಲ್ಲಿ ದಿನಾಂಕ 1-1-83ರಂದು ಕುಡಿಯುವ ನೀರಿನ ಸಮಸ್ಯೆ ಇದ್ದ ಹಳ್ಳಿಗಳ ಸಂಖ್ಯೆ (ಜಿಲ್ಲಾವಾರು ಸಂಖ್ಯೆಗಳ ವಿವರಗಳನ್ನು ಒದಗಿಸುವುದು);

ಆ) ದಿನಾಂಕ 1-1-83ರ ನಂತರ ಡಿಸೆಂಬರ್ ಅಂತ್ಯದವರೆವಿಗೂ ರಾಜ್ಯದಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿದ ಹಳ್ಳಿಗಳ ಸಂಖ್ಯೆ(ಜಿಲ್ಲಾವಾರು ವಿವರಗಳನ್ನು ಒದಗಿಸುವುದು);

ಇ) ದಿನಾಂಕ 1-1-83ರಿಂದ ಡಿಸೆಂಬರ್ ಅಂತ್ಯದವರೆವಿಗೂ ರಾಜ್ಯದಲ್ಲಿ ಕೊರೆದ ಒಟ್ಟು ಕೊಳವೆ ಬಾವಿಗಳ ಸಂಖ್ಯೆ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು) ;

ಈ) ದಿನಾಂಕ 1-1-83ರಿಂದ ತೆಗೆದುಕೊಂಡ ತೆರೆದ ಬಾವಿಗಳ ಸಂಖ್ಯೆ ಹಾಗೂ ದಿನಾಂಕ 31-12-83ರ ಅಂತ್ಯದವರೆಗೆ ಪೂರ್ಣಗೊಂಡ ತೆರೆದ ಬಾವಿಗಳ ಸಂಖ್ಯೆ ಮತ್ತು ಅದಕ್ಕೆ ತಗುಲಿದ ವೆಚ್ಚವೆಷ್ಟು ;

ಉ) ದಿನಾಂಕ 1-1-83ರಂದು ಪೂರ್ಣಗೊಳ್ಳದೆ ಉಳಿದ ಗ್ರಾಮೀಣದಲ್ಲಿ ನೀರು ಸರಬರಾಜು ಯೋಜನೆಗಳು ಎಷ್ಟು ; ಮತ್ತು ಡಿಸೆಂಬರ್ ಅಂತ್ಯದ ವರೆಗೂ ಪೂರ್ಣಗೊಂಡ ಯೋಜನೆಗಳ ಸಂಖ್ಯೆ ಹಾಗೂ ಅದಕ್ಕೆ ತಗಲಿದ ಹಣ ;

ಊ) ದಿನಾಂಕ 1-1-83ರಿಂದ 31-12 83ರ ಅವಧಿಯಲ್ಲಿ ಪೂರ್ಣಗೊಂಡ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆಗಳೆಷ್ಟು ಮತ್ತು ಅವುಗಳಲ್ಲಿ ಉಪಯೋಗದಲ್ಲಿರುವ ಯೋಜನೆಗಳೆಷ್ಟು? ಹಳೇ ಯೋಜನೆಗಳ ಬಗ್ಗೆ ಪ್ರತ್ಯೇಕ ಪಟ್ಟಿಯನ್ನು ಒದಗಿಸುವುದು ಮತ್ತು 1-1-83ರಿಂದ ತೆಗೆದುಕೊಂಡ ಯೋಜನೆಗಳ ಪಟ್ಟಿ?

ಉತ್ತರ : ಶ್ರೀ ಅಬ್ದುಲ್ ನಜೀರ್‌ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) .— ಅ) ಒಟ್ಟು ಗ್ರಾಮಗಳ ಸಂಖ್ಯೆ 18,325

1) ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳ ಸಂಖ್ಯೆ 6,547

2) ಅಭಾವ ಪರಿಸ್ಥಿತಿಯಿಂದ ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳ ಸಂಖ್ಯೆ 11,778

ಒಟ್ಟು 18,325

ಆ) (ಜಿಲ್ಲಾವಾರು ಸಂಖ್ಯೆಗಳ ವಿವರಗಳನ್ನು ಅನುಬಂಧ 1ರಲ್ಲಿ ಒದಗಿಸಲಾಗಿದೆ).

1. ಸಮಸ್ಯೆ ಇದ್ದ ಹಳ್ಳಿಗಳ ಸಂಖ್ಯೆ 5,644

2) ಅಭಾವ ಪರಿಸ್ಥಿತಿ ಇದ್ದ ಹಳ್ಳಿಗಳ ಸಂಖ್ಯೆ 10,479

ಒಟ್ಟು 16,123

ಇ) (ಜಿಲ್ಲಾವಾರು ವಿವರಗಳನ್ನು ಅನುಬಂಧ 2ರಲ್ಲಿ ಒದಗಿಸಲಾಗಿದೆ.)
ಒಟ್ಟು 16,600 ಕೊಳವೆ ಬಾವಿಗಳನ್ನು ಕೊರೆಯಲಾಗಿದೆ (ಅಭಾವ ಪರಿಹಾರ ಸೇರಿ)
(ಜಿಲ್ಲಾವಾರು ಮಾಡಿರತಕ್ಕ ವೆಚ್ಚದ ತಪಶೀಲು ಲಗತ್ತಿಸಿದೆ.)

ಈ) 1) ತೆಗೆದು ಕೊಂಡ ತೆರೆದ ಬಾವಿಗಳ ಸಂಖ್ಯೆ 556

2) ಪೂರ್ಣಗೊಂಡ ತೆರೆದ ಬಾವಿಗಳ ಸಂಖ್ಯೆ 643

3) ತಗುಲಿದ ವೆಚ್ಚ ರೂ. 41,99,608

ಉ) 1) ಪೂರ್ಣಗೊಳ್ಳದ ಉಳಿದ ಯೋಜನೆಗಳ ಸಂಖ್ಯೆ 2,283

2) ತೆಗೆದುಕೊಂಡ ಹಾಗೂ ಪೂರ್ಣಗೊಂಡ ಯೋಜನೆಗಳ ಸಂಖ್ಯೆ 293

ಊ) 293 (ಎಲ್ಲಾ ಹಳೇ ಯೋಜನೆಗಳು) ಜಿಲ್ಲಾವಾರು ವಿವರಗಳನ್ನು ಅನಬಂಧ-4ರಲ್ಲಿ ಕೊಡಲಾಗಿದೆ.

ಅನುಬಂಧ–1

ರಾಜ್ಯದಲ್ಲಿ 31-1-83ರ ವರೆಗೆ ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	1-1-1983ರ ವರೆಗೆ ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳ ಸಂಖ್ಯೆ	ಅಭಾವ ಪರಿಸ್ಥಿತಿಯಿಂದ ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳ ಸಂಖ್ಯೆ	ಮೊತ್ತ
1)	ಬೆಂಗಳೂರು	585	1082	1667
2)	ಕೋಲಾರ	531	908	1439
3)	ಮೈಸೂರು	295	1260	1555
4)	ಮಂಡ್ಯ	178	336	514
5)	ಕೊಡಗು	187	80	267
6)	ಹಾಸನ	259	1180	1439
7)	ದಕ್ಷಿಣ ಕನ್ನಡ	786	824	1610
8)	ಶಿವಮೊಗ್ಗ	820	628	1448
9)	ಚಿಕ್ಕಮಗಳೂರು	323	627	950
10)	ಚಿತ್ರದುರ್ಗ	268	365	633
11)	ತುಮಕೂರು	199	1565	1764
12)	ಧಾರವಾಡ	355	601	956
13)	ಉತ್ತರ ಕನ್ನಡ	504	49	553
14)	ಬೆಳಗಾಂ	186	482	668
15)	ಬಿಜಾಪುರ	268	193	461
16)	ರಾಯಚೂರು	228	380	608
17)	ಬಳ್ಳಾರಿ	163	269	432
18)	ಗುಲ್ಬರ್ಗ	220	701	921
19)	ಬೀದರ್	192	248	440
	ಒಟ್ಟು	6547	11778	18325

ಅನುಬಂಧ–2

ರಾಜ್ಯದಲ್ಲಿ 1-1-83 ರಿಂದ 31-12-83ರ ವರೆಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿದ ಹಳ್ಳಿಗಳ ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	1-1-83 ರಿಂದ 31-12-83ರ ವರೆಗೆ ಪೂರ್ತಿಗೊಳಿಸಲ್ಪಟ್ಟ ಕುಡಿಯುವ ನೀರಿನ ಸಮಸ್ಯೆ ಇರುವ ಹಳ್ಳಿಗಳ ಸಂಖ್ಯೆ	1-1-83ರಿಂದ 31-12-83ರ ವರೆಗೆ ಪೂರ್ತಿಗೊಳಿಸಲಾದ ಹಳ್ಳಿಗಳ ಸಂಖ್ಯೆ (ಅಭಾವ ಪೀಡಿತ)	ಮೊತ್ತ
1.	ಬೆಂಗಳೂರು	132	1143	1275
2.	ಕೋಲಾರ	68	903	971
3.	ಮೈಸೂರು	619	1242	1861
4.	ಮಂಡ್ಯ	464	686	1150
5.	ಕೊಡಗು	81	81	165
6.	ಹಾಸನ	143	792	935
7.	ದಕ್ಷಿಣ ಕನ್ನಡ	750	366	1116
8.	ಶಿವಮೊಗ್ಗ	457	607	1064
9.	ಚಿಕ್ಕಮಗಳೂರು	188	555	743

10.	ಚಿತ್ರದುರ್ಗ	211	369	580
11.	ತುಮಕೂರು	261	944	1205
12.	ಧಾರವಾಡ	463	662	1125
13.	ಉತ್ತರ ಕನ್ನಡ	541	42	583
14.	ಬೆಳಗಾಂ	239	554	793
15.	ಬಿಜಾಪುರ	224	230	454
16.	ಗುಲ್ಬರ್ಗ	139	531	670
17.	ಬೀದರ್	203	271	474
18.	ರಾಯಚೂರು	172	346	518
19.	ಬಳ್ಳಾರಿ	289	152	441
	ಮೊತ್ತ	5644	10479	16123

ಅನುಬಂಧ-3

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಕೊಳವೆಗಳ ಬಾವಿಗಳ ಸಂಖ್ಯೆ	ವೆಚ್ಚ (ಲಕ್ಷ ರೂ.ಗಳಲ್ಲಿ)
1.	ಬೆಂಗಳೂರು	1493	171.31
2.	ಕೋಲಾರ	1123	105.74
3.	ಮೈಸೂರು	1604	321.28
4.	ಮಂಡ್ಯ	990	
5.	ಕೊಡಗು	225	211.57
6.	ಹಾಸನ	1140	
7.	ದಕ್ಷಿಣ ಕನ್ನಡ	960	159.30
8.	ಶಿವಮೊಗ್ಗ	996	152.40
9.	ಚಿಕ್ಕಮಗಳೂರು	746	117.41
10.	ಚಿತ್ರದುರ್ಗ	750	126.69
11.	ತುಮಕೂರು	1263	177.80
12.	ಧಾರವಾಡ	1044	203.37
13.	ಉತ್ತರ ಕನ್ನಡ	664	88.23
14.	ಬೆಳಗಾಂ	705	143.74
15.	ಬಿಜಾಪುರ	697	109.30
16.	ಬಳ್ಳಾರಿ	452	77.46
17.	ರಾಯಚೂರು	652	121.98
18.	ಗುಲ್ಬರ್ಗಾ	708	129.61
19.	ಬೀದರ್	358	83.50
	ಮೊತ್ತ	16600	2498.43

ಅನುಬಂಧ-4

ಗ್ರಾಮಾಂತರ ನೀರು ಸರಬರಾಜು ಯೋಜನೆಯಲ್ಲಿ 1-1-83 ರಿಂದ ಪೂರ್ಣಗೊಂಡ ಯೋಜನೆಗಳು.

ಕ್ರಮ ಸಂಖ್ಯೆ	ಜಿಲ್ಲಾ	ಪೂರ್ಣಗೊಂಡ ಹಳೆ ಯೋಜನೆಗಳು	ಪೂರ್ಣಗೊಂಡ ಹೊಸ ಯೋಜನೆಗಳು
1.	ಬೆಂಗಳೂರು	18	—
2.	ಕೋಲಾರ	22	—
3.	ಮೈಸೂರು	26	—

4.	ಮಂಡ್ಯ	11	—
5.	ಕೊಡಗು	5	—
6.	ಹಾಸನ	13	—
7.	ದಕ್ಷಿಣ ಕನ್ನಡ	15	—
8.	ಶಿವಮೊಗ್ಗ	6	—
9.	ಚಿಕ್ಕಮಗಳೂರು	15	—
10.	ಚಿತ್ರದುರ್ಗ	22	—
11.	ತುಮಕೂರು	2	—
12.	ಧಾರವಾಡ	29	—
13.	ಉತ್ತರ ಕನ್ನಡ	8	—
14.	ಬೆಳಗಾಂ	20	—
15.	ಬಿಜಾಪುರ	22	—
16.	ಗುಲ್ಬರ್ಗ	13	—
17.	ಬೀದರ್	12	—
18.	ರಾಯಚೂರು	23	—
19.	ಬಳ್ಳಾರಿ	11	—
		293	—

ಶ್ರೀ ಎಂ. ಚಂದ್ರಶೇಖರಿತ್ (ನಗರಾಭಿವೃದ್ಧಿ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, 1964ನೇ ಇಸವಿಯ ಬೆಂಗಳೂರು ನೀರು ಸರಬರಾಜು ಹಾಗೂ ಗ್ರಾಮಸಾರ ಮಂಡಲಿಯ ಶಾಸನದ 17(3)ನೇ ಕಲಮಿನ ಮೇರೆಗೆ — 1982-83 ಹಾಗೂ 1983-84ನೇ ಸಾಲುಗಳಿಗೆ ಸಂಬಂಧಿಸಿದ ಬೆಂಗಳೂರು ನೀರು ಸರಬರಾಜು ಹಾಗೂ ಗ್ರಾಮಸಾರ ಮಂಡಲಿಯ ವಾರ್ಷಿಕ ಹಣಕಾಸಿನ ಪಟ್ಟಿಯನ್ನು ನಾನು ಈ ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.— ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಶ್ರೀ ಬಿ.ಹೆಚ್. ಯಂಕಾನಾಯಕ.— ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೇ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದಿರಿ, ಕೊಡಲಿಲ್ಲ.

ಅಧ್ಯಕ್ಷರು — ಆ ಪ್ರಶ್ನೆ ಹೆಲ್ಡ್ ಓವರ್ ಆಗಿದೆ ಎಂದು ಆಗಲೇ ಹೇಳಿದೆನಲ್ಲ. ಈಗ 334ನೇ ಸೂಚನೆ ಮೇರೆಗೆ ಮಾನ್ಯ ಶ್ರೀ ವೀರಪ್ಪ ಮೊಯ್ಲಿಯವರು ಶ್ರೀ ಎಸ್.ಆರ್. ಮೋರೆ, ಶ್ರೀ ಎನ್. ಚಿಕ್ಕೇಗೌಡ, ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಎಸ್. ಬಂಗಾರಪ್ಪ ಮತ್ತು ಶ್ರೀ ಪಿ. ರಾಮದೇವ್ ಅವರು ಕಳುಹಿಸಿಕೊಟ್ಟಿದ್ದಾರೆ. ಅದನ್ನು ಈಗ ತೆಗೆದುಕೊಳ್ಳುತ್ತೇನೆ. ಈಗ ಶ್ರೀ ವೀರಪ್ಪ ಮೊಯ್ಲಿಯವರು ಮಾತನಾಡಬಹುದು.

ನಿಯಮ 334ರ ಮೇರೆಗೆ

ವಿಷಯ : ದೊಡ್ಡಬಳ್ಳಾಪುರದ ವಿದ್ಯುತ್ ಪೂರೈಕೆ ಅಭಾವದ ಬಗ್ಗೆ ನೇಕಾರರ ಪ್ರತಿಭಟನೆ ಮತ್ತು ತತ್ಪರಿಣಾಮವಾಗಿ ನಡೆದ ಗಲಭೆ

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಸಭಾಧ್ಯಕ್ಷರೇ, ನಿನ್ನೆ ಬೆಳಿಗ್ಗೆ ಸುಮಾರು 9-30 ಗಂಟೆ ಸಮಯದಲ್ಲಿ ದೊಡ್ಡಬಳ್ಳಾಪುರದಲ್ಲಿ ಸುಮಾರು 10–15 ಸಾವಿರ ನೇಕಾರರು ಒಂದು ದೊಡ್ಡ ಮೆರವಣಿಗೆಯನ್ನು ತೆಗೆದುಕೊಂಡು ಹೋದರು. ಅವರು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನಿಯರ್ ಆಫೀಸ್ ಕೆ.ಇ.ಬಿ.ಅಲ್ಲಿಗೆ ಹೋಗಿ ಘೇರಾವ್ ಮಾಡುವ ಸಂದರ್ಭದಲ್ಲಿ ದೊಡ್ಡ ಗಲಾಟೆಯೇ ನಡೆಯಿತು. ಅದು ಬರಬರುತ್ತಾ ವಿಪರೀತ ಗೊಂದಲ ಉಂಟಾಗಿ ಸಾರ್ವಜನಿಕರ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿದ್ದಾರೆ, ಕೆಲವು ಕಡೆ ಬೆಂಕಿ ಹಚ್ಚಿದ್ದಾರೆ, ವಿಶೇಷತಃ ಪರ್ಸನಲ್ ಪ್ರಾಪರ್ಟಿಗೆ ಬಹಳ ನಷ್ಟ; ನಿನ್ನೆ ದಿವಸ ಅಲ್ಲಿ ಉಂಟಾಗಿದೆ. ಈ ದೊಡ್ಡಬಳ್ಳಾಪುರ ಎಂದರೆ ಅದನ್ನು ಕರ್ನಾಟಕದ ಒಂದು ಮಂಚೆಸ್ಟರ್ ಎಂದು ಕರೆಯುತ್ತಾರೆ. ಏತಕ್ಕೆಂದರೆ ಅಲ್ಲಿ ಸುಮಾರು 15 ಸಾವಿರ ನೇಕಾರರು ಇದ್ದಾರೆ. ಸುಮಾರು 40 ಸಾವಿರದವರೆಗೆ ಪವರ್ ಲೂಮ್ಸ್ ಇದೆ. ಅವರಿಗೆ ವಿದ್ಯುತ್ ತೊಂದರೆಯಾಗದೇ ಹೋದರೆ ಅವರು ಒಂದು ದಿವಸಕ್ಕೆ ಸುಮಾರು 15-20 ರೂಪಾಯಿನವರೆಗೆ ಸಂಪಾದನೆ ಮಾಡಿಕೊಳ್ಳುತ್ತಾರೆ. ಇಲ್ಲದೇ ಹೋದರೆ ಒಂದು ದಿವಸಕ್ಕೆ 5 ರೂಪಾಯಿ ಕೂಡ ಸಂಪಾದನೆ ಮಾಡುವುದಕ್ಕಾಗುವುದಿಲ್ಲ. ಈ ವಿಚಾರ ತಮಗೂ ಗೊತ್ತಿದೆ. ಬರೇ ಲೆಕ್ಕಕ್ಕೆ ಮಾತ್ರ ಗ್ರಾಮಾಂತರ ಪ್ರದೇಶದಲ್ಲಿ 3 ಗಂಟೆಕಾಲ